ಸಾಕ್ಷಿಯನ್ನು ದಿನಾಂಕ **27-07-2023** ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಶ್ರೀ ಆರ್ ಕೆ ವಿ ವಕೀಲರಿಂದಃ

(ಸಾಕ್ಷಿಗೆ ಕನ್ನಡ, ಇಂಗ್ಲೀಷ್ ಓದಲು ಮತ್ತು ಬರೆಯಲು ಮತ್ತು ಮಾತನಾಡಲು ಬರುವುದಿಲ್ಲ. ತೆಲುಗು ಭಾಷೆ ಓದಲು, ಬರೆಯಲು ಮತ್ತು ಮಾತನಾಡಲು ಬರುತ್ತದೆ ಎಂದು ಹೇಳಿದ್ದರಿಂದ ಭಾಷಾಂತರಣಕಾರರಾಗಿ ಚಿಂತಾಮಣಿ ವಕೀಲರ ಸಂಘದ ವಕೀಲರಾದ ಶ್ರೀ ಬಿ.ಆರ್.ಡಿ ರವರನ್ನು ಭಾಷಾಂತರಣಕಾರರಾಗಿ ವಾದಿಯ ಖರ್ಚಿನಲ್ಲಿ ನೇಮಿಸಿಕೊಳ್ಳಲಾಯಿತು.)

**ಭಾಷಾಂತರಕಾರರಿಗೆ ಪ್ರಮಾಣ ವಚನ ಭೋದಿಸಲಾಯಿತು**

8. ಸ.ನಂ.57/ಪಿ3 ರಲ್ಲಿ 1 ಎಕರೆ 8 ಗುಂಟೆ ಜಮೀನು ನನ್ನ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ನನ್ನ ದೊಡ್ಡಪ್ಪ ವಿಲ್ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಆ ವಿಲ್ ನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ಆ ಸರ್ವೇ ನಂಬರ್ ನ ಆರ್ ಟಿ ಸಿ ಮತ್ತು ಮ್ಯುಟೇಷನ್ ನನ್ನ ಹೆಸರಿಗೆ ಮಾಡಿಸಿಕೊಂಡಿದ್ದೇನೆ.

9. ಸ.ನಂ.115/1 ರಲ್ಲಿ 13 ಗುಂಟೆ ನನ್ನ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ನನ್ನ ದೊಡ್ಡಪ್ಪ ನನ್ನ ಹೆಸರಿಗೆ ವಿಲ್ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸ.ನಂ.113 ರಲ್ಲಿ 12 ಗುಂಟೆ ಜಮೀನು ನನ್ನ ಹೆಸರಿನಲ್ಲಿ ಇದೆ ಎಂದರೆ ಸರಿ. ಸ.ನಂ.114 ರ ಜಮೀನು ನನ್ನ ಹೆಸರಿನಲ್ಲಿದೆ ಎಂದರೆ ಸರಿ. ಸಾಕ್ಷಿ ಆ ಜಮೀನು ಸಹ ನನ್ನ ದೊಡ್ಡಪ್ಪ ನನ್ನ ಹೆಸರಿಗೆ ವಿಲ್ ಮಾಡಿದ್ದಾರೆ ಎಂದು ನುಡಿಯುತ್ತಾರೆ.

10. ಮಾಸನಪಲ್ಲಿ ಗ್ರಾಮದಲ್ಲಿರುವ ಹೌಸ್ ಲಿಸ್ಟ್ ನಂ.6 ರ ಮನೆ ನನ್ನ ಹೆಸರಿನಲ್ಲಿದೆ. ಸದರಿ ಮನೆಯಲ್ಲಿ ನಾನೇ ವಾಸವಿದ್ದೇನೆ. ಈ ಮೇಲೆ ಹೇಳಿದ ಸ.ನಂ. ಮತ್ತು ಮನೆಯನ್ನು ಈ ಕೇಸಿನಲ್ಲಿ ಸೇರಿಸಿಲ್ಲ ಎಂದರೆ ಸರಿ. ಈ ಮೇಲೆ ಹೇಳಿದ ಆಸ್ತಿಗಳಿಗೆ ಸಂಬಂಧಿಸಿದ

ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಆ ಜಮೀನನ್ನು ನನ್ನ ದೊಡ್ಡಪ್ಪ ನನ್ನ ಹೆಸರಿಗೆ ವಿಲ್ ಮಾಡಿದ್ದರಿಂದ ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ. ಆ ವಿಲ್ ನ್ನು ಯಾವಾಗ ಮಾಡಿದ್ದರು ಮತ್ತು ಅದರಲ್ಲಿ ಬೇರೆ ಯಾವ ಆಸ್ತಿಗಳನ್ನು ಸೇರಿಸಿದ್ದರು ಎಂದು ಹೇಳಲಾಗುವುದಿಲ್ಲ. ಸಾಕ್ಷಿ ಸ್ವತಃ ಮುಂದುವರೆದು ನಮ್ಮ ತಂದೆಯ ಆಸ್ತಿಗೂ ಮತ್ತು ನನ್ನ ದೊಡ್ಡಪ್ಪ ಆಸ್ತಿಗೂ ಯಾವುದೇ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ನನ್ನ ದೊಡ್ಡಪ್ಪ ನನ್ನ ಹೆಸರಿಗೆ ಯಾವುದೇ ವಿಲ್ ಮಾಡದೇ ಇದ್ದರೂ, ನನ್ನ ಸಹೋದರರಿಗೆ ಮೋಸ ಮಾಡುವ ಉದ್ದೇಶದಿಂದ ವಿಲ್ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

11. ಈ ದಾವೆಯಲ್ಲಿ ನನ್ನ ತಂದೆಗೆ ನಾನು ಮತ್ತು 1 ನೇ ಪ್ರತಿವಾದಿ ಇಬ್ಬರೇ ವಾರಸುದಾರರು ಎಂದು ಹೇಳಿದ್ದೇನೆ. ಹೆಣ್ಣು ಮಕ್ಕಳಿಗೆ ಮೋಸ ಮಾಡಬೇಕೆಂದು ಅವರನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯನ್ನು ಆಸ್ತಿಯಲ್ಲಿ ಭಾಗ ನೀಡುವಂತೆ 10 ವರ್ಷದ ಹಿಂದೆ ಕೇಳಿದ್ದೆ. ದಾವಾ ಐಟಂ.ನಂ.2 ಪ್ರತಿವಾದಿಗೆ ಸೇರಿದ್ದು ಆ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಐಟಂ.ನಂ.2 ನ್ನು ಪ್ರತಿವಾದಿ 1 ಎಕರೆ 6 ಗುಂಟೆ ಜಮೀನನ್ನು ಖರೀದಿಸಿದ್ದ ಮತ್ತು ಉಳಿದ 1 ಎಕರೆ 6 ಗುಂಟೆ ಜಮೀನು ರಿಲೀಸ್ ಡೀಡ್ ಮೂಲಕ ಆತನಿಗೆ ಬಂದಿತ್ತು ಎಂದರೆ ಸರಿಯಲ್ಲ. ದಾವಾ ಐಟಂ.ನಂ.3 ಮತ್ತು 4 ಪ್ರತಿವಾದಿಗೆ ಸೇರಿದ್ದು ಆ ಆಸ್ತಿಗಳ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

12. 1965 ರಲ್ಲಿಯೇ ಪ್ರತಿವಾದಿ ಮತ್ತು ನಾನು ವಿಭಾಗ ಮಾಡಿಕೊಂಡಿದ್ದೇವೆ, ನಂತರ ವಿಭಾಗದ ನಂತರ ಪ್ರತಿವಾದಿ ದಾವಾ ಐಟಂ.ನಂ.2 ರಿಂದ 4 ನ್ನು ಪ್ರತಿವಾದಿ ಖರೀದಿಸಿದ್ದಾರೆ

ಎಂದರೆ ಸುಳ್ಳು ದಾವಾ ಐಟಂ.ನಂ.1 ರಲ್ಲಿ ನನಗೆ ಅರ್ಧ ಭಾಗ ಮತ್ತು ಪ್ರತಿವಾದಿಗೆ ಅರ್ಧ ಭಾಗ ಇದೆ ಎಂದರೆ ಸಾಕ್ಷಿ ಆ ಪೂರ್ತಿ ಆಸ್ತಿ ನನಗೆ ಸೇರಿದ್ದು ಎಂದು ನುಡಿಯುತ್ತಾರೆ. ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ತಂದಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯನ್ನು ಎಂದಿಗೂ ಭಾಗ ಕೇಳಿಲ್ಲ ಮತ್ತು ಆತ ತಿರಸ್ಕರಿಸಿಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲಃ</u>**

ನನ್ನ ಉಕ್ತಲೇಖನದ ರೀತ್ಯಾತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿಂತಾಮಣಿ